**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ವಿರಾಜಪೇಟೆ.**

**ಸಿ ಸಿ ನಂ. : 699/2019**

**ಪಿಡಬ್ಲ್ಯೂ – 2**

**ದಿನಾಂಕ 04–02–2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಆರೋಪಿ ಪರ ಶ್ರೀ. ಎ. ಕೆ. ಎಂ. ವಕೀಲರಿಂದಃ –**

1. ನಾನು 32 ವರ್ಷದಿಂದ ಸೊಸೈಟಿಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನನಗೆ ಬ್ಯಾಂಕ್ ವ್ಯವಹಾರ ಬಗ್ಗೆ ಸಂಪೂರ್ಣ ಜ್ಞಾನ ಇದೆ ಎಂದರೆ ಸರಿ. ಯಾವುದೇ ಗ್ರಾಹಕರಿಗೆ ಸಾಲವನ್ನು ನೀಡಬೇಕಾದರೆ, ಸದರಿಯವರು ಸೊಸೈಟಿ ಸದಸ್ಯರಾಗಿರಬೇಕು ಎಂದರೆ ಸರಿ. ಯಾವ ಮಾನದಂಡದ ಮೇಲೆ ಸಾಲವನ್ನು ಕೊಡಬೇಕು ಎಂದು ಬೈ ಲಾ ದಲ್ಲಿ ನಮೂದು ಆಗಿದೆ ಎಂದರೆ ಸರಿ. ಸಾಮಾನ್ಯವಾಗಿ ಗ್ರಾಹಕರು ಸಾಲವನ್ನು ಪಡೆದಾಗ, ಅವರಿಗೆ ಖಾತೆಯನ್ನು ಮಾಡಿಸಿ ಪುಸ್ತಕವನ್ನು ನೀಡುತ್ತೇವೆ ಎಂದರೆ ಸರಿ. ಸಾಲ ಮಂಜೂರಾದ ನಂತರ ಗ್ರಾಹಕರ ಖಾತೆಗೆ ಸಾಲವನ್ನು ವರ್ಗಾವಣೆ ಮಾಡುತ್ತೇವೆ ಎಂದರೆ ಸರಿ.

2. ಆರೋಪಿಯು ಪಿರ್ಯಾದಿ ಸೊಸೈಟಿಯಿಂದ ರೂ. 1 ಲಕ್ಷ ಸಾಲವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು ವ್ಯಾಪಾರಕ್ಕಾಗಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಆರೋಪಿಯು 2016ನೇ ಇಸವಿಯಲ್ಲಿ ಸಾಲವನ್ನು ಪಡೆದುಕೊಂಡಿರುತ್ತಾರೆ. ಈ ವಿಚಾರ ದೂರಿನಲ್ಲಿ ನಮೂದಾಗಿರುವುದಿಲ್ಲ. ಆರೋಪಿಯ ಯಾವ ಖಾತೆ ಸಂಖ್ಯೆಗೆ ಸಾಲದ ಹಣವನ್ನು ವರ್ಗಾವಣೆ ಮಾಡಲಾಗಿದೆ ಎಂದು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಯಾವ ದಿನಾಂಕ ಸಾಲ ವರ್ಗಾವಣೆ ಮಾಡಲಾಗಿದೆ ಎಂದು ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಆರೋಪಿಯು ಸಾಲ ಪಡೆಯುವಾಗ ನೀಡಿರುವ ದಾಖಲೆಗಳು ಹಾಗೂ ಸಾಲದ ಅರ್ಜಿ ಈಗಲೂ ಸಹ ನಮ್ಮ ಸೊಸೈಟಿಯ ಕಛೇರಿಯಲ್ಲಿದೆ ಎಂದರೆ ಸರಿ. ಆರೋಪಿಯ ಖಾತೆಗೆ ಹಣ ವರ್ಗಾವಣೆ

ಮಾಡಿದ ಬಗ್ಗೆ ವಿವರಗಳು ಸೊಸೈಟಿಯಲ್ಲಿ ಇರುತ್ತದೆ. ಮೇಲೆ ಹೇಳಿದ ಎಲ್ಲಾ ದಾಖಲೆಗಳು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಗೆ ಶೇ. 15 ರಷ್ಟು ವಾರ್ಷಿಕ ಬಡ್ಡಿದರದಂತೆ ಸಾಲವನ್ನು ನೀಡಲಾಗಿತ್ತು.

3. ಆರೋಪಿಗೆ ಠೇವಣಿ ಇಲ್ಲದೆ ಸಾಲವನ್ನು ನೀಡಲಾಗಿದೆ. ಆರೋಪಿಯು ಯಾವುದೇ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆರೋಪಿಯ ಮಗಳ ಹೆಸರು ಲೈಲಾ ಎಂದರೆ ಸರಿ. ಸದರಿಯವರು ಸೊಸೈಟಿಯ ಸದಸ್ಯಳಾಗಿರುತ್ತಾಳೆ ಎಂದರೆ ಸರಿ. ಸದರಿಯವರು ಪಿರ್ಯಾದಿ ಸೊಸೈಟಿಯಿಂದ ಸಾಲವನ್ನು ಪಡೆದಿದ್ದು, ಅವರ ವಿರುದ್ಧ ಸಹ ಚೆಕ್ ಕೇಸ್ ನ್ನು ದಾಖಲು ಮಾಡಲಾಗಿದೆ ಎಂದರೆ ಸರಿ.

4. ನಿಪಿ1 ಆರೋಪಿಯ ಮಗಳು ಲೈಲಾ ಅವರಿಗೆ ಸೇರಿದ ಚೆಕ್ ಎಂದರೆ ಸರಿಯಲ್ಲ. ಆರೋಪಿಯ ಮಗಳು ಲೈಲಾ ಸಾಲವನ್ನು ಪಡೆದಿದ್ದಕ್ಕಾಗಿ, ನೀಡಿದ ಚೆಕ್ ನ್ನು ದೂರುಪಯೋಗ ಮಾಡಿ, ಈ ಒಂದು ಸುಳ್ಳು ಪ್ರಕರಣ ಆರೋಪಿಯ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸೊಸೈಟಿಯ ಸಿಬ್ಬಂದಿಯಾದ ಕೃಷ್ಣ ಎನ್ನುವವರು ಸೊಸೈಟಿಯ ಹಣವನ್ನು ದೂರುಪಾಯೋಗ ಮಾಡಿ, ಸೊಸೈಟಿಗೆ ನಷ್ಟ ಉಂಟು ಮಾಡಿದ ಬಗ್ಗೆ ಈ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ನಷ್ಟವನ್ನು ತುಂಬಿ ತೆಗೆಯಲು ಹಲವಾರು ಗ್ರಾಹಕರ ವಿರುದ್ಧ ಚೆಕ್ ಪ್ರಕರಣ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿಯು ಸೊಸೈಟಿಯಿಂದ ಯಾವುದೇ ಸಾಲವನ್ನು ಪಡೆದಿಲ್ಲ ಮತ್ತು ಯಾವುದೇ ಸಾಲದ ಹಣವನ್ನು ಮರುಪಾವತಿ ಮಾಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ1 ನ್ನು 2019 ರಲ್ಲಿ ನೀಡಿರುತ್ತಾರೆ. ನಿಪಿ 1 ನ್ನು ನಾವೇ ಭರ್ತಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

Sd/-

(ಪ್ರದೀಪ ಪೋತದಾರ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ., ವಿರಾಜಪೇಟೆ.